ಪದಬಂಧ



ಎಡದಿಂದ ಬಲಕ್ಕೆ:

1. ಜಾರಿಸಿ, ಗೀರಿಸಿ ಗಾಡಿ ಏರಿಸಿದ್ದು ಪ್ರಾಚೀನ ಸಸ್ಯ (4)
3. ಕಲಸು ಮೇಲೋಗರವಾಯಿತು ನೋಡಿ, ಎಲ್ಲವೂ (3)
7. ಕೆಟ್ಟ ಧಣಿ ಹೋದನೆಂದು ಸಂತಸದ ನಗೆತ (4)
8. ಪರರಿಗೆ ಸಿಕ್ಕ ಲಾಭವೇ ಅದರ ಆಸೆಯ ಸೆಳೆತ (3)
9. ದಕ್ಷಿಣದ ಕಡೆಗೇ ಇದೆ, ಬಾಗಿಲು (2)
12. ಕೊಂಚವೂ ಮಾಸಲಿಲ್ಲ ಆ ಕಪ್ಪು ಬಣ್ಣ (2)
14. ದಯವಿಲ್ಲದ ಉದ್ಯೋಗಕ್ಕೆ ಬೀಳ್ಕೊಡುಗೆಯೇ ಸರಿ (3)
15. ಇಂಥ ಕಸೂತಿ ಕೆಲಸಕ್ಕೆ ಎಷ್ಟು ಸಮಯ ಸೂಕ್ತ? (4)
17. ಕಟುಕನ ಜೀವನ ಕಥೆಯ ನೇರ ಅಭಿನಯ ಪ್ರದರ್ಶನ (3)
18. ಆ ಪರಿಯ ವೇಷ ನೋಡಿ ಅದರಲ್ಲೇ ಮೈಮರೆವುದೇ? (4)

ಮೇಲಿಂದ ಕೆಳಕ್ಕೆ:

1. ಜೈಲಿನಲ್ಲಿ ಎಲ್ಲೆಲ್ಲೂ ಇದೆಂಥ ನೀರು? (2)
2. ಗಣಿಕಾರರ ಬಳಕೆಗೆ ಹಿಟ್ಟು ಮಾಡುವ ಕಾರ್ಖಾನೆ (3)
4. ಏನನ್ನು ಕೊಳ್ಳಬಯಸಿದರೂ ಕದಿಯುವವರ ಹೆದರಿಕೆ (4)
5. ಕೊಟ್ಟು-ಕೊಟ್ಟು ಸಾಕಾಗಿ ಅದೇ ವಿಪತ್ತಾಯಿತು (3)
6. ಅಲ್ಲಿನ ಪ್ರಾರ್ಥನಾ ಕ್ರಮ- ಅದಕ್ಕೆ ಹೋಲಿಕೆಯೇ ಇಲ್ಲ (4)
10. ಕಾಣೆಯಾದವರಲ್ಲಿ ಒಬ್ಬ ಸೇನಾಧಿಪತಿಯೂ ಇದ್ದಾನೆ (4)
11. ಸಾವಿರ ಆಟ ಸೇರಿ ಕಡೆಗೆ ಸಿಹಿ ಭೋಜನ (4)
13. ಸೇತುವೆ ಏರಿ ನುಡಿಸಿದ್ದು ಭಾರೀ ತಂತೀವಾದ್ಯ (3)
16. ಕೆರೆಯಲ್ಲಿ ನೀರು ಕುಡಿದಿದ್ದಕ್ಕೆ ಈ ಭೀಕರ ಅಂಟುರೋಗ (3)
17. ವಿಷ ಪ್ರಾಶನದಿಂದ ಎಲ್ಲ ಹಾಳು (2)

## 29-5-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಮಾಧಾನ; 3. ಪ್ರಮಾದ; 4. ರಜತ; 6. ನಳಪಾಕ; 7. ಕನ್ನಡ; 9. ಹುರುಪು; 11. ಕಸರು; 13. ಗುಣಕ; 15. ನೆರೆಜನ; 17. ಗಡಿಗೆ; 18. ನಗರ; 19. ಸುಧಾರಿಸು.

ಮೇಲಿಂದ ಕೆಳಕ್ಕೆ:

1. ಸದನ; 2. ನರಕ; 3. ಪ್ರಸನ್ನ; 5. ತಣ್ಣೀರು; 7. ಕಳಂಕ; 8. ಡಮರು; 9. ಹುದುಗು; 10. ಪುಳಕ; 12. ಸಲಗ; 14. 'ಣಮರ' (ರಮಣ ತಲೆ ಕೆಳಗು); 15. ನೆಗೆಸು; 16. ನನಸು.

## ಪ್ರಶ್ನಾ ಂಕಣ

# ಕವಲುಕೊಂಬು-ಉದ್ದೇಶ ಏನು?

ಧರೆಯ ನೆಲವಾಸಿ ಸಸ್ಯಾಹಾರಿ ಸ್ತನಿಗಳಲ್ಲಿ 'ಸಮಸಂಖ್ಯಾಗೊರಸಿನ' ಪ್ರಾಣಿಗಳದೇ ಒಂದು ವಿಶಿಷ್ಟ ವರ್ಗ. ಈ ವರ್ಗದ ಪ್ರಾಣಿಗಳ ವಿಶೇಷ ಏನೆಂದರೆ ಅವೆಲ್ಲ ಶಿರಾಲಂಕೃತವಾಗಿವೆ; ಅವೆಲ್ಲ ವಿಧ ವಿಧ ಕೊಂಬುಗಳಿಂದ ಅಲಂಕರಿಸಲ್ಪಟ್ಟಿವೆ. ಈ ವರ್ಗದಲ್ಲಿ ಐದು ಕುಟುಂಬಗಳಿವೆ. ಅವುಗಳಲ್ಲೊಂದಾದ 'ಸರ್ವಿಡೇ' ಕುಟುಂಬದ ಎಲ್ಲ ಪ್ರಾಣಿಗಳೂ- ಜಿಂಕೆ, ಕ್ಯಾರಿಬೂ, ಎಲ್ಕ್, ಮೂಸ್ ಇತ್ಯಾದಿ (ಚಿತ್ರ ನೋಡಿ ಪಡೆದಿರುವ ಶಿರಾಲಂಕಾರವೇ 'ಕವಲು ಕೊಂಬು'. ಕವಲು ಕೊಂಬುಗಳ ಹಿಂದಿರುವ ಪ್ರಕೃತಿಯ ಉದ್ದೇಶ ವಾಸ್ತವವಾಗಿ ಅದು ನಿಗೂಢ; ಸ್ಪಷ್ಟವಾಗಿಲ್ಲದ ಒಗಟು.

ಸರ್ವಿಡೇ ಕುಟುಂಬದ ಪ್ರಾಣಿಗಳಲ್ಲಿ ಪ್ರತಿ ವರ್ಷ ಗಂಡುಗಳ ನೆತ್ತಿಯ ಮೇಲೆ ಬೆಳೆದು ನಿಲ್ಲುವ ಕವಲು ಕೊಂಬುಗಳು ಗಂಡುಗಳಿಗೆ ಆಕರ್ಷಕ ರೂಪವನ್ನು ಒದಗಿಸುತ್ತವೆ. ಅವುಗಳ ಉದ್ದೇಶ ಅಷ್ಟೇ ಇದ್ದಿರಬಹುದು. ಏಕೆಂದರೆ ಪ್ರತಿ ವರ್ಷ ಸಂತಾನ ಕಾಲ ಮುಗಿದೊಡನೆ ಕವಲು ಕೊಂಬುಗಳು ತಂತಾನೇ ಉದುರಿಹೋಗುತ್ತವೆ. ವಿಪರ್ಯಾಸ ಏನೆಂದರೆ ವಿಧ ವಿಧ ಉದ್ದ, ತೂಕ, ಆಕಾರ, ವಿಸ್ತಾರಗಳಲ್ಲಿ ಕವಲು ಕವಲಾಗಿ ಕೊಂಬೆ ರಂಬೆಗಳಂತೆ ಬೆಳೆವ ಈ ಕೊಂಬುಗಳು (ಚಿತ್ರ ನೋಡಿ) ಒಳಗೆಲ್ಲ ಟೊಳ್ಳು. ಹಾಗಾಗಿ ತೀರ ದುರ್ಬಲ. ಧರಿಸಿದ ಪ್ರಾಣಿಗೆ ದಿವ್ಯ ಗಾಂಭೀರ್ಯ ಒದಗಿಸುವ ಈ ಸುಂದರ ಸಂಕೀರ್ಣ ಅಶಾಶ್ವತ ಅಲಂಕಾರ ವಾಸ್ತವವಾಗಿ ಅದೇ ಪ್ರಾಣಿಯ ಜೀವಹಾನಿಗೆ, ದುರ್ಮರಣಕ್ಕೆ ಕಾರಣವಾಗಬಲ್ಲದಷ್ಟೆ!

ಏಕೆಂದರೆ ಸಂತಾನ ಕಾಲದಲ್ಲಿ ಸರ್ವಿಡೇ ಕುಟುಂಬದ ಪ್ರತಿ ಪ್ರಭೇದದಲ್ಲೂ




ಪ್ರತಿಯೊಂದು ಹಿಂಡಿನ ಪ್ರತಿ ಗಂಡು ಪ್ರಾಣಿಯೂ ತನ್ನ ಬಲ ಬಳಸಿ ಎಲ್ಲ ಪ್ರತಿಸ್ಪರ್ಧಿಗಳನ್ನೂ ಹಿಮ್ಮೆಟ್ಟಿಸಿ ಹಿಂಡಿನ ಎಲ್ಲ ಹೆಣ್ಣುಗಳ ಏಕೈಕ ಯಜಮಾನ ಆಗಲು ಯತ್ನಿಸುತ್ತದೆ. ಅಂಥ ಸಮರಗಳಲ್ಲಿ ಗಂಡುಗಳು ಪರಸ್ಪರ ಒದ್ದು ತಲೆಗಳನ್ನು ಘಟ್ಟಿಸುತ್ತವೆ. ಈ ಸೆಣಸಾಟದಲ್ಲಿ ಅವುಗಳ ಬಹು ಕವಲುಗಳ 'ದುರ್ಬಲ' ಕೊಂಬುಗಳು ಯಾವ ನೆರವನ್ನೂ ನೀಡುವುದಿಲ್ಲ. ತದ್ವಿರುದ್ಧವಾಗಿ ಗಂಡುಗಳು ಢಿಕ್ಕಿ ಹಾಕುವಾಗ ಎಷ್ಟೋ ಬಾರಿ ಈ ಕವಲು ಕೊಂಬುಗಳು ಒಂದಕ್ಕೊಂದು ತೆಕ್ಕೆ ಬೀಳುತ್ತವೆ. ಬಿಡಿಸಿಕೊಳ್ಳಲು ಸಾಧ್ಯವೇ ಆಗದಂತೆ ತಗುಲಿಕೊಂಡು ನೋವು ನೀಡುತ್ತ ರಕ್ತ ಸುರಿಸುತ್ತವೆ. ಎರಡೂ ಬಲಿಷ್ಠ ಯುದ್ಧಾಳುಗಳು ಹಾಗೆಯೇ ಒದ್ದಾಡುತ್ತ ನೆಲಕ್ಕೊರಗಿ ಹುಲ್ಲು-ನೀರು ಇಲ್ಲದೆ ಬೇಟೆಗಾರ ಪ್ರಾಣಿಗಳಿಗೆ ಸುಲಭವಾಗಿ ಬಲಿಯಾಗುತ್ತವೆ.

ಕೇವಲ ಅಲಂಕಾರಿಕವಾಗಿದ್ದು ಜೊತೆಗೆ ಅಪಾಯಕರ ಹೊರೆ ಆಗಿರುವ ಕವಲು ಕೊಂಬುಗಳ ನಿರರ್ಥಕತೆಯನ್ನು ನಿಸರ್ಗವೂ ಗಮನಿಸಿದೆ. ಅದಕ್ಕೇ ಈ ಶಿರಸ್ಸಿಂಗಾರಗಳನ್ನು ಸರಳಗೊಳಿಸಿ ನಿರಪಾಯಕರವಾಗಿಸುವ ಪ್ರಯೋಗಗಳನ್ನೂ ಪ್ರಕೃತಿ ಕೈಗೊಂಡಿದೆ. 'ಕಸ್ತೂರಿ ಮೃಗ ಮತ್ತು ಚೈನೀಸ್ ವಾಟರ್ ಡೀರ್'ಗಳಂಥ ಸರ್ವಿಡೇಗಳಲ್ಲಿ ಈ ರೂಪಾಂತರ ಯಶಸ್ವಿಯಾಗಿದೆ ಕೂಡ.

■ ಎನ್. ವಾಸುದೇವ್